ಹಮ್ಮಿಕೊಳ್ಳುವುದು, ಕರಪತ್ರ, ಭಿತ್ತಿಪತ್ರಗಳನ್ನು ಹಂಚುವುದರ ಮೂಲಕ ಯೋಜನೆಗಳ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಲಾಗಿದೆ.

ಜ–ಎ ವಿತರಣೆ ಕಾಲುವೆ ಯೋಜನೆ

3199 (3036); ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ)

ಅ) ಕೃಷ್ಣಾ ಬಲದಂಡೆ ನಾಲೆಯಿಂದ 5–ಎ ವಿತರಣೆ ಕಾಲುವೆ ಯೋಜನೆಯನ್ನು ಜಾರಿಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಸದರಿ 5–ಎ ಕಾಲುವೆಯ ಯೋಜನೆಯನ್ನು ಜಾರಿಗೊಳಿಸುವ ವ್ಯಾಪ್ತಿಯಲ್ಲಿ ಎಷ್ಟು ಎಕರೆ ಪ್ರದೇಶವು ನೀರಾವರಿ ವ್ಯಾಪ್ತಿಗೆ ಹಾಗೂ ಯಾವ ಯಾವ ತಾಲ್ಲೂಕು ಮತ್ತು ಯಾವ ಯಾವ ಗ್ರಾಮಗಳು ಒಳಪಡುತ್ತವೆ;

ಇ) ಈಗಾಗಲೇ ಈ ಯೋಜನೆಯ ಜಾರಿಗಾಗಿ ರೈತರು ಹೋರಾಟವನ್ನು ಪ್ರಾರಂಭಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ (ಸಂಪೂರ್ಣ ವಿವರ ನೀಡುವುದು)?

ಶ್ರೀ ಎಂ.ಬಿ. ಪಾಟೀಲ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ಯಿಂದ ಈ) ವರೆಗೆ ನಾರಾಯಣಪೂರ 5–ಎ ವಿತರಣಾ ಕಾಲುವೆ ಯೋಜನೆ ಕುರಿತು ಆ ಭಾಗದ ರೈತರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಕ್ಕೆ ಮನವಿ ಸಲ್ಲಿಸಿರುತ್ತಾರೆ. ರೈತರ ಮನವಿಯನ್ವಯ ನಿಗಮದಲ್ಲಿ, ಪರಿಶೀಲಿಸಲಾಗುತ್ತಿದೆ. ನಾರಾಯಣಪೂರ 5–ಎ ವಿತರಣ ಕಾಲುವೆಗೆ ಯಾವುದೇ ನೀರಿನ ಹಂಚಿಕೆ ಇರುವುದಿಲ್ಲ.